# ಸ್ಮಾರಕಗಳ ಸಂರಕ್ಷಣೆ ಮತ್ತು ಪುನಶ್ಚೇತನಗೊಳಿಸುವಲ್ಲಿ ಸರಕಾರ ಮತ್ತು ಯುವ ಜನತೆಯ ಪಾತ್ರ

**ಸದಾಶಿವ ಎಸ್. ಮುಗಳಿ**

ಮುಖ್ಯಸ್ಥರು, ಇತಿಹಾಸ ವಿಭಾಗ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, (ರಾ.ಚ.ವಿ), ಬೆಳಗಾವಿ.

DOI: https://doi.org/10.5281/zenodo.17296612

## ABSTRACT:

ಭಾರತವು ಅನಾದಿ ಕಾಲದಿಂದಲೂ ತನ್ನ ವಿಶಾಲ ಪರಂಪರೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿದ್ದು, ಐತಿಹಾಸಿಕ ಮಹತ್ವ ಮತ್ತು ಹಿರಿಮೆಯನ್ನು ಹೊಂದಿರುವ ಅನೇಕಾನೇಕ ಪ್ರಾಚೀನ ತಾಣಗಳು ಮತ್ತು ಪಾರಂಪರಿಕ ಸ್ಮಾರಕಗಳಿಗೆ ನೆಲೆಯಾಗಿ ನಿಂತಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಗಳು, ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ನೀತಿಗಳನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಸರಕಾರ ಪ್ರಾಮುಖ್ಯತೆಯನ್ನು ನೀಡುತ್ತಿದೆ. ದೇಶದಾದ್ಯಂತ ಪಸರಿಸಿರುವ ಪ್ರಾಚೀನ ಕಲಾ ಕುರುಹುಗಳನ್ನು ರಕ್ಷಿಸಿ, ಸಂರಕ್ಷಿಸಿ ಮೂಲ ಸ್ವರೂಪದಲ್ಲಿ ಕಾಯ್ದುಕೊಂಡು ಭವ್ಯ ಭಾರತದ ಭವಿತವ್ಯದ ಪೀಳಿಗೆಗೆ ಕೊಂಡೊಯ್ಯುವಲ್ಲಿ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರಕಾರ ಮತ್ತು ಆಯಾ ರಾಜ್ಯ ಸರಕಾರಗಳು ಪ್ರಥಮ ಪ್ರಾಶಸ್ತ್ಯ ನೀಡುತ್ತಿರುವುದು ದೇಶದ ಸಮಗ್ರತೆ ಮತ್ತು ಏಕತೆಯನ್ನು ಗಟ್ಟಿಗೊಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಸ್ವತಂತ್ರ ಪೂರ್ವದಲ್ಲಿ ಸ್ಥಾಪಿತವಾದ ದೇಶದ ಅತೀ ಹಳೆಯ ಸಂಸ್ಥೆಗಳಲ್ಲಿ ಒಂದಾಗಿರುವ ಪುರಾತತ್ವ ಇಲಾಖೆಯು ಸಂಸ್ಕೃತಿ ಮಂತ್ರಾಲಯದ ಅಡಿಯಲ್ಲಿ ದೇಶದ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಸ್ವಚ್ಛ ಭಾರತ ಅಭಿಯಾನ, ವಿಶ್ವ ಯೋಗ ದಿವಸ, ಅನಿವಾಸಿ ಭಾರತೀಯ ದಿವಸ, ಅಂತರರಾಷ್ಟ್ರೀಯ ಸಭೆ ಸಮ್ಮೇಳನಗಳು, ರಾಷ್ಟ್ರೀಯ ಅಂತರರಾಷ್ಟ್ರೀಯ ಕ್ರೀಡಾಕೂಟಗಳು ನಮ್ಮ ಪರಂಪರೆಯ ಸಂವರ್ಧನೆಯಲ್ಲಿ ಕೈಜೋಡಿಸುತ್ತಿವೆ. ಭಾರತ ಇಂದು ವಿಶ್ವದಲ್ಲಿ ಅತ್ಯಧಿಕ ಯುವ ಜನತೆಯನ್ನು ಹೊಂದಿದ ದೇಶವಾಗಿದೆ. ಈ ಯುವ ಜನತೆಯನ್ನು ದೇಶದ ಪರಂಪರೆ, ಪ್ರಾಚೀನ ಕುರುಹುಗಳ ರಕ್ಷಣೆಯಲ್ಲಿ ಪಾಲುದಾರರನ್ನಾಗಿ ಮಾಡಿಕೊಳ್ಳುವ ವಿಪುಲ ಅವಕಾಶಗಳಿವೆ.

## KEYWORDS:

ಸಂರಕ್ಷಣೆ, ಪುರಾತತ್ವ, ಹೆರಿಟೇಜ್, 'ದೇಕೋ ಅಪನಾ ದೇಶ್', ಸ್ಮಾರಕಗಳು.

**ಪೀಠಿಕೆ**

ಭಾರತವು ಅನಾದಿ ಕಾಲದಿಂದಲೂ ತನ್ನ ವಿಶಾಲ ಪರಂಪರೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿದ್ದು, ಐತಿಹಾಸಿಕ ಮಹತ್ವ ಮತ್ತು ಹಿರಿಮೆಯನ್ನು ಹೊಂದಿರುವ ಅನೇಕಾನೇಕ ಪ್ರಾಚೀನ ತಾಣಗಳು ಮತ್ತು ಪಾರಂಪರಿಕ ಸ್ಮಾರಕಗಳಿಗೆ ನೆಲೆಯಾಗಿ ನಿಂತಿದೆ. ಒಂದಲ್ಲ ಎರಡಲ್ಲ ನೂರಾರು ಸಾವಿರಾರು ಗುಡಿ–ಗುಂಡಾರ, ದೇವಾಲಯಗಳು, ಅರಮನೆಗಳು, ಕೋಟೆ ಕೊತ್ತಲಗಳು, ಗುಹಾಲಯಗಳು, ಸ್ತೂಪ, ವಿಹಾರ, ಚೈತ್ಯಗೃಹ ಜೊತೆಗೆ ಇನ್ನೂ ಹಲವು ಪ್ರಾಚ್ಯ ಅವಶೇಷಗಳು ತಮ್ಮ ನೆಲದ, ತಮ್ಮ ನಾಡಿನ ವೈಭವ ಮತ್ತು ಸಾಂಸ್ಕೃತಿಕ ವೀರ ಪರಂಪರೆಯನ್ನು ಜಗತ್ತಿಗೆ ಸಾರಿ ಹೇಳುತ್ತಿವೆ. ಇಂತಹ ಪ್ರಾಚೀನ ಅಸ್ಮಿತೆಯ ಕುರುಹುಗಳನ್ನು ರಕ್ಷಿಸಿ ಪುನಶ್ಚೇತನಗೊಳಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಸರಕಾರ, ಸಂಘ, ಸಂಸ್ಥೆ, ಶಿಕ್ಷಣ ಕೇಂದ್ರಗಳು ಮತ್ತು ಇಂದಿನ ಯುವಕರ ಮೇಲಿದೆ. ರಾಷ್ಟ್ರದ ಕಾಲಾತೀತ ಹಾಗೂ ಸಿರಿವಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮಹತ್ವವನ್ನು ಭಾರತ ಸರಕಾರ ತನ್ನ ಪ್ರಥಮ ಆದ್ಯತೆಯಾಗಿ ಪರಿಗಣಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಗಳು, ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ನೀತಿಗಳನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಸರಕಾರ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಈ ಲೇಖನದಲ್ಲಿ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯಲ್ಲಿ ಸರಕಾರ, ಸಂಘ ಸಂಸ್ಥೆ ಮತ್ತು ಯುವಕರ ಪಾತ್ರದ ಕುರಿತು ವಿಮರ್ಶಿಸಲಾಗಿದೆ. ಪ್ರಾಚೀನ ಪರಂಪರೆಗೆ ಪೂರಕವಾದ ಪಾರಂಪರಿಕ ತಾಣಗಳನ್ನು ಮತ್ತು ಸ್ಮಾರಕಗಳನ್ನು ರಕ್ಷಿಸುವಲ್ಲಿ ಸರಕಾರದ ನೆರವಿನೊಂದಿಗೆ 'ವಿಕಾಸ್ ಭಿ ವಿರಾಸತ್ ಭಿ' ಎಂಬ ಘೋಷಣೆಯಡಿಯಲ್ಲಿ ಜಿ20 ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿಗಳು ತಮ್ಮ ಕಾರ್ಯಯೋಜನೆಯ ಮಹತ್ವವನ್ನು ತಿಳಿಸಿ ರಾಜ್ಯ ಸರಕಾರಗಳಿಗೆ ಈ ನಿಟ್ಟಿನಲ್ಲಿ ಕಾರ್ಯಾತತ್ಪರಾಗಲು ಕರೆ ನೀಡಿದ್ದಾರೆ.

**ಲೇಖನದ ಉದ್ದೇಶಗಳು**

ಈ ಸಂಶೋಧನ ಲೇಖನದ ಉದ್ದೇಶ ಭಾರತದ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯಲ್ಲಿ ನಿರತ ವಿವಿಧ ಸಂಘ ಸಂಸ್ಥೆ, ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿವಿಧ ಇಲಾಖೆಗಳ ಯೋಜನೆಗಳು, ಆ ಯೋಜನೆಗಳ ಧ್ಯೇಯ, ಉದ್ದೇಶ ಮತ್ತು ಕಾರ್ಯಕ್ರಮಗಳ ಪಾತ್ರದ ಕುರಿತು ವಿಮರ್ಶೆ ಮಾಡುವುದಾಗಿದೆ. ಅಲ್ಲದೇ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯಲ್ಲಿ ಯುವಜನತೆಯ ಸದ್ಬಳಕೆ ಮತ್ತು ಅವರ ಪಾತ್ರದ ಕುರಿತು ತಿಳಿದುಕೊಳ್ಳುವುದಾಗಿದೆ.

**ಲೇಖನದ ಫಲಿತಾಂಶಗಳು**

ಈ ಲೇಖನದ ಫಲಿತಾಂಶ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ ಪುನಶ್ಚೇತನಗೊಳಿಸುವುದು, ಪ್ರವಾಸೋದ್ಯಮವನ್ನು ಬಲಪಡಿಸುವುದು, ವಿದ್ಯಾರ್ಥಿ ಮತ್ತು ಸಾರ್ವಜನಿಕ ವಲಯದಲ್ಲಿ ದೇಶದ ಸ್ಮಾರಕಗಳ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ತಿಳುವಳಿಕೆಯನ್ನು ಹೆಚ್ಚಿಸುವುದು. ಪ್ರಾಚೀನ ಕುರುಹುಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವಲ್ಲಿ ಸಂಘ, ಸಂಸ್ಥೆ, ಸಾರ್ವಜನಿಕ ಹಾಗೂ ಖಾಸಗಿ ವಲಯದ ಒಳಗೊಳ್ಳುವಿಕೆಗೆ ಪ್ರಾಶಸ್ತ್ಯ ನೀಡುವುದಾಗಿದೆ.

**ಸ್ಮಾರಕಗಳ ಸಂರಕ್ಷಣೆಯಲ್ಲಿ ಸರಕಾರ ಮತ್ತು ಸಂಘ ಸಂಸ್ಥೆಗಳ ಪಾತ್ರ**

ದೇಶದಾದ್ಯಂತ ಪಸರಿಸಿರುವ ಪ್ರಾಚೀನ ಕಲಾ ಕುರುಹುಗಳನ್ನು ರಕ್ಷಿಸಿ, ಸಂರಕ್ಷಿಸಿ ಮೂಲ ಸ್ವರೂಪದಲ್ಲಿ ಕಾಯ್ದುಕೊಂಡು ಭವ್ಯ ಭಾರತದ ಭವಿತವ್ಯದ ಪೀಳಿಗೆಗೆ

ಕೊಂಡೊಯ್ಯುವಲ್ಲಿ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರಕಾರ ಮತ್ತು ಆಯಾ ರಾಜ್ಯ ಸರಕಾರಗಳು ಪ್ರಥಮ ಪ್ರಾಶಸ್ತ್ಯ ನೀಡುತ್ತಿರುವುದು ದೇಶದ ಸಮಗ್ರತೆ ಮತ್ತು ಏಕತೆಯನ್ನು ಗಟ್ಟಿಗೊಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಅವುಗಳಲ್ಲಿ ಕೆಲವನ್ನು ಈ ಮುಂದಿನಂತೆ ಉಲ್ಲೇಖಿಸಲಾಗಿದೆ:

1. 'ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ': ಸ್ವತಂತ್ರ ಪೂರ್ವದಲ್ಲಿ ಸ್ಥಾಪಿತವಾದ ದೇಶದ ಅತೀ ಹಳೆಯ ಸಂಸ್ಥೆಗಳಲ್ಲಿ ಒಂದಾಗಿರುವ ಪುರಾತತ್ವ ಇಲಾಖೆಯು ಸಂಸ್ಕೃತಿ ಮಂತ್ರಾಲಯದ ಅಡಿಯಲ್ಲಿ ದೇಶದ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ದೇಶದಾದ್ಯಂತ 37 ವಲಯಗಳನ್ನು ಹೊಂದಿದ್ದು, ಇಲ್ಲಿಯವರೆಗೆ ಸುಮಾರು 3698ಕ್ಕೂ ಅಧಿಕ ಸ್ಮಾರಕಗಳನ್ನು ಸಂರಕ್ಷಿತ ರಾಷ್ಟ್ರೀಯ ಸ್ಮಾರಕವೆಂದು ಗುರುತಿಸಲಾಗಿದೆ. ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯ್ದೆ–1904, ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರ, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ತಾಣಗಳು ಮತ್ತು ಅವಶೇಷಗಳ ಕಾಯ್ದೆ–1958ರ ಅಡಿಯಲ್ಲಿ ಸ್ಮಾರಕಗಳನ್ನು ಸಂರಕ್ಷಿಸಲಾಗುತ್ತಿದೆ. ಭಾರತದ ಜಗತ್ ಪ್ರಸಿದ್ಧ 44 ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳನ್ನು ಈ ಇಲಾಖೆಯ ಮೂಲಕ ಸಂರಕ್ಷಿಸಲಾಗುತ್ತಿದೆ.
2. 'ಪುರಾತತ್ವ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ': ಕರ್ನಾಟಕ ರಾಜ್ಯದ ಉಪಕ್ರಮವಾಗಿರುವ ಈ ಇಲಾಖೆಯಡಿ ಒಟ್ಟು ಸುಮಾರು 848 ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಲಾಗಿದೆ. ಇದೇ ರೀತಿ ಅನೇಕ ರಾಜ್ಯಗಳಲ್ಲಿ ಪ್ರತ್ಯೇಕ ಪುರಾತತ್ವ ಇಲಾಖೆಯಡಿ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಲಾಗುತ್ತಿದೆ.
3. 'ವಿಕಾಸ್ ಭಿ ವಿರಾಸತ್ ಭಿ': ಇದರ ಅರ್ಥ 'ಪರಂಪರೆಯ ಜೊತೆಗೆ ಅಭಿವೃದ್ಧಿ'. ಇದರ ಮುಖ್ಯ ಉದ್ದೇಶ ಭೂತಕಾಲವನ್ನು ಗೌರವಿಸುತ್ತಾ ಭವಿಷ್ಯವನ್ನು ನಿರ್ಮಿಸುವುದು. ಸಾಂಸ್ಕೃತಿಕ, ಐತಿಹಾಸಿಕತೆಗೆ ಧಕ್ಕೆಯಾಗದಂತೆ ಪ್ರಗತಿ ಸಾಧಿಸುವುದು. ಈ ಪ್ರಗತಿಯನ್ನು ಸಾಧಿಸಲು ಈ ಕೆಳಕಂಡ ಮಿಶ್ರ ವಿಧಾನಗಳನ್ನು ಅನುಸರಿಸುವ ಅಗತ್ಯವಿದೆ:
    - ಪ್ರಾಚೀನ ನಗರಗಳೊಂದಿಗೆ ಪರಂಪರೆಯನ್ನು ಸಂಯೋಜಿಸುವುದು.
    - ಸುಸ್ಥಿರ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವುದು.
    - ಸಮುದಾಯದ ಒಳಗೊಳ್ಳುವಿಕೆ
    - ವಿಜ್ಞಾನ ಮತ್ತು ತಂತ್ರಜ್ಞಾನದ ಸದ್ಬಳಕೆ
4. 'ಏಕ ಭಾರತ ಶ್ರೇಷ್ಠ ಭಾರತ': ಇದೊಂದು ಸರಕಾರದ ಉಪಕ್ರಮ. ಇದು ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನಡುವೆ ರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುತ್ತದೆ. ಇದರಡಿಯಲ್ಲಿ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸುವ ಯೋಜನೆಯನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗಿದೆ.
5. 'ಅಡಾಪ್ಟ್ ಎ ಹೆರಿಟೇಜ್: ಅಪ್ನಿ ಧರೋಹರ್ ಅಪ್ನಿ ಪೆಹಚಾನ್': ಈ ಯೋಜನೆಯಡಿಯಲ್ಲಿ ದೇಶದ ಮೂಲೆಮೂಲೆಯಲ್ಲಿರುವ ಪರಂಪರೆ, ನೈಸರ್ಗಿಕ ಪ್ರವಾಸಿ ತಾಣಗಳಲ್ಲಿ ಪ್ರವಾಸೋದ್ಯಮದ ಸೌಲಭ್ಯಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.
6. 'ಅಡಾಪ್ಟ್ ಎ ಮಾನ್ಯುಮೆಂಟ್ ನಮ್ಮ ಸ್ಮಾರಕ': ಈ ಯೋಜನೆಯಲ್ಲಿ ಕರ್ನಾಟಕದಲ್ಲಿ

ಸುಮಾರು 800ಕ್ಕೂ ಅಧಿಕ ಸ್ಮಾರಕಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ದತ್ತು ಪಡೆದು ಸಂರಕ್ಷಿಸುವ ಉದ್ದೇಶ ಹೊಂದಿದೆ.

7. 'ಮಾನ್ಯುಮೆಂಟ್ ಮಿತ್ರ': ಸ್ಮಾರಕಗಳನ್ನು ದತ್ತು ಪಡೆದು ಸಂರಕ್ಷಿಸುವ ಕ್ರಮವಾಗಿದೆ.
8. 'ಟ್ರಾವೆಲ್ ಫಾರ್ ಲೈಫ್': ಜೀವನಕ್ಕಾಗಿ ಪ್ರಯಾಣ. ಇದರಲ್ಲಿ ವಿಶೇಷವಾಗಿ ಐತಿಹಾಸಿಕ ಪಾರಂಪರಿಕ ಸ್ಥಾನಗಳಿಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಪ್ರಯಾಣ ಕೈಗೊಳ್ಳುವುದು.
9. 'ದೇಕೋ ಅಪನಾ ದೇಶ್': ಇದರಡಿಯಲ್ಲಿ ನಮ್ಮ ದೇಶದ ಎಲ್ಲ ಐತಿಹಾಸಿಕ ಸ್ಥಳಗಳನ್ನು ವೀಕ್ಷಿಸಿ ಪರಂಪರೆಯ ಜ್ಞಾನ ಪಡೆದುಕೊಳ್ಳುವುದು.
10. 'ಸ್ವದೇಶ ದರ್ಶನ 2.0': ಈ ಸಂದೇಶದಡಿ ಪ್ರತಿವರ್ಷ ಭಾರತಕ್ಕೆ ಆಗಮಿಸುವ ಸಹಸ್ರಾರು ವಿದೇಶಿ ಪ್ರವಾಸಿಗರಿಗೆ ಸಕಲ ಸೌಲಭ್ಯಗಳನ್ನು ಒದಗಿಸಿ ದೇಶದ ಆದಾಯ ಹೆಚ್ಚಿಸುವಲ್ಲಿ ಪ್ರವಾಸೋದ್ಯಮವನ್ನು ಬಲಪಡಿಸುವುದು.
11. 'ಚಾರಧಾಮ್ ರೋಡ್ ಪ್ರಾಜೆಕ್ಟ್ ಪರಿಯೋಜನಾ': ಭಾರತ ಸರ್ಕಾರದ ಈ ಯೋಜನೆಯಡಿಯಲ್ಲಿ ಉತ್ತರಾಖಂಡದಲ್ಲಿರುವ ಹಿಂದೂ ಧರ್ಮದ ಪವಿತ್ರ ತೀರ್ಥಸ್ಥಳಗಳಾದ ಬದರೀನಾಥ, ಕೇದಾರನಾಥ, ಗಂಗೋತ್ರಿ ಮತ್ತು ಯಮುನೋತ್ರಿ ಇವುಗಳನ್ನು ಸಂಪರ್ಕಿಸುವ ಸುಮಾರು 825 ಕಿ.ಮೀ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಈ ಯೋಜನೆಯನ್ನು ದೇಶದಾದ್ಯಂತ ವಿಸ್ತರಿಸುವ ಅಗತ್ಯವಿದೆ.
12. 'ಪ್ರಸಾದ್ (ತೀರ್ಥಯಾತ್ರೆ ಪುನರುಜ್ಜೀವನ ಮತ್ತು ಆಧ್ಯಾತ್ಮಿಕ ವರ್ಧನೆ)': ಪ್ರವಾಸೋದ್ಯಮ ಸಚಿವಾಲಯ 2014-15 ರಲ್ಲಿ ಪ್ರಸಾದ್ ಯೋಜನೆಯನ್ನು ಪ್ರಾರಂಭಿಸಿತು. ಇದರ ಉದ್ದೇಶ ಭಾರತಾದ್ಯಂತ ಧಾರ್ಮಿಕ ಪ್ರವಾಸೋದ್ಯಮ ಉತ್ತೇಜಿಸಿ ಪ್ರಾಚೀನ ಧಾರ್ಮಿಕ ನೆಲೆಗಳನ್ನು ಸಂರಕ್ಷಿಸುವುದು ಮತ್ತು ಅಭಿವೃದ್ಧಿ ಪಡಿಸುವುದಾಗಿದೆ. ಈ ಯೋಜನೆಯ ಮೂಲಕ ಕಾಶಿ ವಿಶ್ವನಾಥ ಕಾರಿಡಾರ್, ಮಹಾಕಾಲ ಜ್ಯೋತೀರ್ಲಿಂಗ ಪ್ರಾಜೆಕ್ಟ್, ಮಾ ಕಾಮಾಕ್ಯ ಕಾರಿಡಾರ್ ಅಭಿವೃದ್ಧಿ ಕಂಡಿವೆ.
13. 'ಗುರು-ಶಿಷ್ಯ ಪರಂಪರಾ': ಸಂಸ್ಕೃತಿ ಮಂತ್ರಾಲಯದ ಈ ಯೋಜನೆಯಡಿಯಲ್ಲಿ ಭಾರತದ ಪ್ರಾಚೀನ ಪ್ರದರ್ಶನ ಕಲೆಗಳು ಮತ್ತು ಇನ್ನಿತರ ಕಲಾ ಪ್ರಭೇದಗಳನ್ನು ಸಂರಕ್ಷಿಸುವ ಉದ್ದೇಶ ಹೊಂದಿದೆ.
14. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ (ಎಸ್‌ಡಿಎಮ್‌ಡಿ): ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ರಕ್ಷಿಸಿ, ಪುನರುಜ್ಜೀವನಗೊಳಿಸುವ ಧ್ಯೇಯದೊಂದಿಗೆ 1991 ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯಿಂದ ಇಲ್ಲಿಯವರೆಗೆ ಸುಮಾರು 200 ವರ್ಷಗಳಿಗಿಂತ ಹಳೆಯದಾದ ಸುಮಾರು 224 ದೇವಾಲಯಗಳನ್ನು ಪೂರ್ವಸ್ಥಿತಿಗೆ ತರಲಾಗಿದೆ.
15. 'ನ್ಯಾಷನಲ್ ಮಿಷನ್ ಆನ್ ಕಲ್ಚರಲ್ ಮ್ಯಾಪಿಂಗ್ ಅಂಡ್ ರೋಡ್ ಮ್ಯಾಪಿಂಗ್': ಸಂಸ್ಕೃತಿ ಸಚಿವಾಲಯದ ಈ ಯೋಜನೆಯಡಿ ರಾಷ್ಟ್ರದ ಸಾಂಸ್ಕೃತಿಕ ತಾಣಗಳು, ಸಾಂಸ್ಕೃತಿಕ ಆಸ್ತಿಗಳ, ಕಲೆಯ ಪ್ರಕಾರಗಳನ್ನು ರಕ್ಷಿಸಿ ನಕ್ಷೆ ತಯಾರಿಸಿ ಪ್ರಾಚೀನ ತಾಣಗಳನ್ನು ವಲಯಗಳನ್ನಾಗಿ ವಿಸ್ತರಿಸಿ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದಾಗಿದೆ.
16. 'ನಮ್ಮ ಸ್ಮಾರಕ': ಕರ್ನಾಟಕ ಸರಕಾರದ ಈ ಯೋಜನೆಯಡಿಯಲ್ಲಿ ಸಂಘ, ಸಂಸ್ಥೆ,

ವಿಶ್ವವಿದ್ಯಾಲಯಗಳು, ಕಾಲೇಜುಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತ್‌ಗಳು ಸ್ಥಳೀಯ ತಮ್ಮ ಸುತ್ತಮುತ್ತಲಿನ ಪರಿಸರದ ಪ್ರಾಚೀನ ನೆಲೆಗಳನ್ನು ದತ್ತು ಪಡೆದು ಸಂರಕ್ಷಿಸುವುದಾಗಿದೆ.

17. 'ಗಡ ಸಂವರ್ಧನ ಮತ್ತು ಸ್ಮಾರಕ ಸಂರಕ್ಷಣಾ ಯೋಜನೆ': ಮಹಾರಾಷ್ಟ್ರ ಸರಕಾರದ ಈ ಯೋಜನೆಯನ್ನು 2015ರಲ್ಲಿ ಸ್ಥಾಪಿಸಲಾಗಿದೆ. ಇದರ ಅಂತರ್ಗತ ಶಿವಾಜಿ ಮಹಾರಾಜರ ಕಾಲಕ್ಕೆ ಮತ್ತು ಮರಾಠ ಅರಸರ ಕಾಲಕ್ಕೆ ನಿರ್ಮಿತ ಕೋಟೆ ಕೊತ್ತಲ ಮತ್ತು ವಾಡೆಗಳನ್ನು ಸಂರಕ್ಷಿಸುವ ಉದ್ದೇಶ ಹೊಂದಿದೆ. ಇಲ್ಲಿಯವರೆಗೆ ರಾಜ್ಯದ 28 ಕೋಟೆಗಳಲ್ಲಿ 24 ಕೋಟೆಗಳನ್ನು ಸಂರಕ್ಷಿಸಲಾಗಿದೆ.
18. 'ಮಹಾರಾಷ್ಟ್ರ ವೈಭವ ರಾಜ್ಯ ಸಂರಕ್ಷಿತ ಸ್ಮಾರಕ ಸಂಗೋಪನ ಯೋಜನಾ': ಮಹಾರಾಷ್ಟ್ರ ಸರಕಾರದಿಂದ 2007ರಲ್ಲಿ ಸ್ಥಾಪಿತವಾದ ಈ ಯೋಜನೆಯಡಿಯಲ್ಲಿ ಪ್ರಾಚೀನ ಐತಿಹಾಸಿಕ ಪರಂಪರೆಯ ಸಂಕೇತಗಳಾಗಿರುವ ಕೋಟೆಗಳು, ವಾಸ್ತುಶಿಲ್ಪ, ಪ್ರಾಚೀನ ಗುಹೆಗಳು ಮತ್ತು ಶಾಸನಗಳನ್ನು ಅವುಗಳ ಮೂಲರೂಪದಲ್ಲಿ ಸಂರಕ್ಷಿಸುವ ಮತ್ತು ಪುನರುಜ್ಜೀವನಗೊಳಿಸುವ ಉದ್ದೇಶ ಹೊಂದಿದೆ.
19. 'ಜನಪದೀಯ ಸಂರಕ್ಷಿತ ಮಂದಿರ (ಜಿಲ್ಲಾ ಸಂರಕ್ಷಿತ ದೇವಾಲಯಗಳು)': ಉತ್ತರ ಪ್ರದೇಶ ರಾಜ್ಯದಲ್ಲಿ ಸ್ಥಾಪಿತವಾದ ಈ ಯೋಜನೆಯಡಿ ಆಯಾ ಜಿಲ್ಲೆಯಲ್ಲಿರುವ ಪ್ರಾಚೀನ ದೇವಾಲಯ ಮತ್ತು ಸ್ಮಾರಕಗಳನ್ನು ಸಂರಕ್ಷಿಸುವ ಉದ್ದೇಶ ಹೊಂದಿದೆ. ರಾಜ್ಯದಲ್ಲಿ 267 ಸಂರಕ್ಷಿತ ಸ್ಮಾರಕಗಳಿವೆ. ಒಟ್ಟು 75 ಜಿಲ್ಲೆಗಳಲ್ಲಿ 40 ಜಿಲ್ಲೆಗಳ ಕೆಲಸ ಪೂರ್ಣಗೊಂಡಿದೆ.
20. 'ಗಾಂಧೀ ಹೆರಿಟೇಜ್ ಸೈಟ್ಸ್ ಮಿಷನ್': 2023 ರಲ್ಲಿ ಸ್ಥಾಪಿತವಾದ ಈ ಯೋಜನೆ ಪ್ರಾಚೀನ ಸ್ಮಾರಕಗಳಿಗೆ ಅನ್ವಯಿಸದಿದ್ದರೂ ಸಹ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜೀವನಕ್ಕೆ ಸಂಬಂಧಿಸಿದ ಮೂರ್ತ ಅಮೂರ್ತ ತಾಣಗಳನ್ನು ಸಂರಕ್ಷಿಸುವ ಉದ್ದೇಶ ಹೊಂದಿದೆ. ಈ ರೀತಿಯ ಹೆಚ್ಚಿನ ಯೋಜನೆಗಳನ್ನು ರಚಿಸುವ ಅವಶ್ಯಕತೆಯಿದೆ.

ಇವುಗಳಲ್ಲದೇ ಸ್ವಚ್ಛ ಭಾರತ ಅಭಿಯಾನ, ವಿಶ್ವ ಯೋಗ ದಿವಸ, ಅನಿವಾಸಿ ಭಾರತೀಯ ದಿವಸ, ಅಂತರರಾಷ್ಟ್ರೀಯ ಸಭೆ ಸಮ್ಮೇಳನಗಳು, ರಾಷ್ಟ್ರೀಯ ಅಂತರರಾಷ್ಟ್ರೀಯ ಕ್ರೀಡಾಕೂಟಗಳು ನಮ್ಮ ಪರಂಪರೆಯ ಸಂವರ್ಧನೆಯಲ್ಲಿ ಕೈಜೋಡಿಸುತ್ತಿವೆ. ಈ ರೀತಿಯಲ್ಲಿ ದೇಶದ ಇನ್ನೂ ಅನೇಕ ರಾಜ್ಯ ಸರಕಾರಗಳು ನಮ್ಮ ಪ್ರಾಚೀನ ಪರಂಪರೆಯನ್ನು ಸಂರಕ್ಷಿಸುವಲ್ಲಿ ಖಾಸಗಿ, ಸಾರ್ವಜನಿಕ ವಲಯದ ನೆರವು ಪಡೆದು ಕಾರ್ಯೋನ್ಮುಖವಾಗಿವೆ.

**ಸ್ಮಾರಕಗಳ ಸಂರಕ್ಷಣೆಯಲ್ಲಿ ಯುವಜನತೆಯ ಪಾತ್ರ**

ಭಾರತ ಇಂದು ವಿಶ್ವದಲ್ಲಿ ಅತ್ಯಧಿಕ ಯುವ ಜನತೆಯನ್ನು ಹೊಂದಿದ ದೇಶವಾಗಿದೆ. ಈ ಯುವ ಜನತೆಯನ್ನು ದೇಶದ ಪರಂಪರೆ, ಪ್ರಾಚೀನ ಕುರುಹುಗಳ ರಕ್ಷಣೆಯಲ್ಲಿ ಪಾಲುದಾರರನ್ನಾಗಿ ಮಾಡಿಕೊಳ್ಳುವ ವಿಪುಲ ಅವಕಾಶಗಳಿವೆ. ಯುವಜನತೆಯನ್ನು ಸ್ಮಾರಕಗಳ ರಾಯಭಾರಿಯನ್ನಾಗಿಸಿಕೊಳ್ಳಬಹುದಾಗಿದೆ. ಸ್ಮಾರಕಗಳ ಸಂರಕ್ಷಣಾ ಕ್ರಮಗಳನ್ನು ಈ ರೀತಿ ಮುಂದಿನಂತೆ ವಿವರಿಸಲಾಗಿದೆ:

» ಸ್ವಯಂ ಸೇವಕರ ಗುಂಪುಗಳ ರಚನೆ

» ಸ್ಮಾರಕಗಳ ಕುರಿತು ಪ್ರಬಂಧ/ಛಾಯಾಚಿತ್ರ/ಭಾಷಣ ಸ್ಪರ್ಧೆ ಏರ್ಪಡಿಸುವುದು

» ಸ್ಮಾರಕಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು
» ಸುತ್ತ ಮುತ್ತಲಿನ ಸ್ಮಾರಕಗಳಿಗೆ ರಾಯಭಾರಿಗಳ ನಿಯೋಜನೆ
» ಪ್ರಾಚೀನ ವಿನಾಶದ ಅಂಚಿನಲ್ಲಿರುವ ಸ್ಮಾರಕವನ್ನು ದತ್ತು ತೆಗೆದುಕೊಳ್ಳುವುದು
» ಲೇಖನ/ಪುಸ್ತಕ/ಕೈಪಿಡಿ ಪ್ರಕಟಿಸುವುದು
» ಸ್ಮಾರಕಗಳ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಸರಕಾರಕ್ಕೆ ಹಕ್ಕೊತ್ತಾಯ ಮತ್ತು ನಿಧಿ ಸಂಗ್ರಹ
» ರಾಷ್ಟ್ರೀಯ ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಕಾರ್ಯಾಗಾರ ಹಮ್ಮಿಕೊಳ್ಳುವುದು
» ಸ್ಮಾರಕಗಳ ಪ್ರಸಾರಕ್ಕಾಗಿ ಸೇವ್ ಹೆರಿಟೇಜ್/ಹೆರಿಟೇಜ್ ನಡಿಗೆ/ಮ್ಯಾರಥಾನ್ ಏರ್ಪಡಿಸುವುದು
» ದತ್ತಿ ಸರಣಿ ಉಪನ್ಯಾಸ ಮಾಲಿಕೆಗಳನ್ನು ಆಯೋಜಿಸುವುದು.
» ಶಾಲಾ ಕಾಲೇಜುಗಳಲ್ಲಿ ಪ್ರಾಚ್ಯಾವಶೇಷಗಳ ಕಲಾ ವಸ್ತುಸಂಗ್ರಹಾಲಯ ಸ್ಥಾಪನೆಗೆ ಒತ್ತು ನೀಡುವುದು.
» ಶಾಲಾ ಕಾಲೇಜುಗಳಲ್ಲಿ ಪ್ರವಾಸೋದ್ಯಮ/ವಿಶ್ವ ಪರಂಪರೆ/ವಸ್ತು ಸಂಗ್ರಹಾಲಯ ದಿನಾಚರಣೆ ಆಚರಿಸುವುದು
» ಪ್ರವಾಸಕ್ಕೆ ಉತ್ತೇಜನ ನೀಡುವುದು.
» ಸ್ಮಾರಕಗಳ ರಕ್ಷಣೆಯಲ್ಲಿ ವಿಜ್ಞಾನ ತಂತ್ರಜ್ಞಾನದ ಬಳಕೆ
» ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪರಂಪರೆ ಕೂಟಗಳ ಸ್ಥಾಪನೆ

**ಉಪಸಂಹಾರ**

ಭಾರತ ಹಿಂದೊಮ್ಮೆ ಜಗತ್ತಿಗೆ ತನ್ನ ಜ್ಞಾನಮಾರ್ಗ ಬೋಧಿಸಿ ಜಗದೊಡೆಯ ಎನಿಸಿಕೊಂಡಿತ್ತು. ಕಲೆ, ವಾಸ್ತುಶಿಲ್ಪ, ಶಿಲ್ಪಕಲೆ, ಸಂಗೀತ, ಸಾಹಿತ್ಯ, ನೃತ್ಯ, ಪ್ರದರ್ಶನ ಕಲೆಗಳು, ಧ್ಯಾನ, ಯೋಗ, ವೃತ್ತಿಗಳು, ಆರೋಗ್ಯ, ಚಿಕಿತ್ಸಕ ವಿಧಾನ ಇತ್ಯಾದಿ ಜಗತ್ತಿಗೆ ನೀಡಿದ ಭಾರತದ ಕೊಡುಗೆಯಾಗಿವೆ. ಇಂತಹ ಪ್ರಾಚೀನತೆಯ ಕುರುಹುಗಳಾಗಿರುವ ಐತಿಹಾಸಿಕ ಸ್ಮಾರಕಗಳನ್ನು ರಕ್ಷಿಸಿ, ಸಂರಕ್ಷಿಸಿ ಮುಂಬರುವ ಪೀಳಿಗೆಗೆ ಯಥಾವತ್ತಾಗಿ ಕೊಂಡೊಯ್ಯುವ ಅವಶ್ಯಕತೆಯಿದೆ. ಇವುಗಳ ಸಂರಕ್ಷಣೆ ಕೇವಲ ಸರಕಾರದ ಜವಾಬ್ದಾರಿಯಾಗಿರದೆ ದೇಶದ ಯುವ ಜನತೆ, ಖಾಸಗಿ ವಲಯ, ಸಾರ್ವಜನಿಕ ವಲಯ ಕೈಜೋಡಿಸುವ ಅಗತ್ಯವಿದೆ. ಇವುಗಳ ರಕ್ಷಣೆಯಲ್ಲಿ ಎಲ್ಲರೂ ಏಕಪಕ್ಷೀಯವಾಗಿ ಶ್ರಮಿಸುವಂತಾಗಬೇಕು. ಈ ಮೂಲಕ ಭಾರತದ ಕಲಾ ಶ್ರೀಮಂತಿಕೆಯನ್ನು ಜಗತ್ತಿಗೆ ಪರಿಚಯಿಸಿದಂತಾಗುವುದು.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ. ಎಂ., (1980), ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಬೆಂಗಳೂರು.
2. ಕುಲಕರ್ಣಿ ಎಚ್. ಆರ್., (2000), ಕರ್ನಾಟಕದ ಆರಂಭಿಕ ಶಿಲ್ಪಕಲೆ, ಬೆಂಗಳೂರು.
3. ಗೋಪಾಲ್ ಬಿ. ಆರ್., (1983), ಬನವಾಸಿ ಕದಂಬರು, ಕದಂಬ ಸಾಂಸ್ಕೃತಿಕ ಅಧ್ಯಯನ, ಶಿರಸಿ.
4. ಗೋಪಾಲ್ ಆರ್. (ಸಂ)., (2010), ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು.
5. ಮಹಾದೇವ ಸಿ., (2006) ಕರ್ನಾಟಕ ದೇವಾಲಯ ಕೋಶ: ಧಾರವಾಡ ಜಿಲ್ಲೆ, ಕವಿ.ವಿ, ಹಂಪಿ.
6. ಸುರೇಬಾನಕರ, ಸ್ಮಿತಾ., (2013) ಬೆಳಗಾವಿ ವಾಸ್ತುಶಿಲ್ಪ ನಿಧಿ ಒಂದು ವಿಶ್ಲೇಷಣೆ, ಬೆಳಗಾವಿ.
7. ಮುಕ್ಕುಂಡಿ, ಶ್ರೀಕಾಂತಾಚಾರ್ಯ., ದೇವಾಲಯಗಳ ಪರಿಕಲ್ಪನೆ,. ವಿಶ್ವಮಧ್ವ ಮಹಾಪರಿಷದ್, ಬೆಂಗಳೂರು.
8. ಇತಿಹಾಸ ದರ್ಶನದ ಲೇಖನಗಳು, ಅಂತರ್ಜಾಲದ ಬಳಕೆ
9. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ವಿವಿಧ ರಾಜ್ಯ ಪುರಾತತ್ವ ಇಲಾಖೆಯ ಕೈಪಿಡಿಗಳು
10. Fergusson J., (1866), Architecture in Dharwad & Mysore, Bombay.
11. Gerard Foekema., (2003), Chalukyan Architecture, Delhi.
12. Ghose, A., (2022), Conservation and Restoration of Cultural Heritage, Agamkala Prakashan.
13. Batra N.L., (1997), Heritage Conservation, Aryan Books.
14. Nagar S.L., (2002), Protection Conservation and Preservation of Indian Monuments, Aryan Books.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.